<u>ದಿನಾಂಕಃ **24.01.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಸಿ ಬಿ ವಕೀಲರಿಂದಃ</u>

1 ನೇ ಪ್ರತಿವಾದಿಯು ಮಾನ್ಯ ಉಪ ವಿಭಾಗಧಿಕಾರಿಯವರ ನ್ಯಾಯಾಲಯದಲ್ಲಿ ದಾಖಲಿಸಿದ ಮೇಲ್ಮನವಿ ನಿಪಿ-13 ರಲ್ಲಿ ನಾನು 4 ನೇ ಪ್ರತಿವಾದಿಯಾಗಿದ್ದು, ವಕೀಲರ ಮುಖಾಂತರ ಹಾಜರಾಗಿರುತ್ತೇನೆ ಅಂದರೆ ಸರಿ. ನಿಮ್ಮ ಪರವಾಗಿ ವಕೀಲರು 2 ಮತ್ತು 3 ನೇ ಪ್ರತಿವಾದಿಯವರ ತಂದೆ ಶಿವಪ್ಪ ಮತ್ತು ವೀರಭದ್ರಪ್ಪರವರ ಪರವಾಗಿಯೂ ಸಹ ಹಾಜರಾಗಿದ್ದರು ಅಂದರೆ ನನಗೆ ಗೊತ್ತಿಲ್ಲ. ನಿಪಿ-13 ರಲ್ಲಿ ನಿಮ್ಮ ಮತ್ತು ಶಿವಪ್ಪ, ವೀರಭದ್ರಪ್ಪ ರವರ ಪರ ವಕೀಲರು ತಂದೆ ಸಹೋದರರ ಮಧ್ಯೆ ವಿಭಾಗವಾಗಿರುತ್ತದೆ ಎಂದು ನಮೂದಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಿಪಿ-14 ರಲ್ಲಿ ಸ.ನಂ.89 ಮತ್ತು ಸ.ನಂ.116/1 ನ್ನು ಹೊರತುಪಡಿಸಿ, ಉಳಿದ ಸ್ವತ್ತುಗಳಿಗೆ ಖಾತೆ ಮಾಡಲು ಆದೇಶ ಆಗಿರುತ್ತದೆ ಅಂದರೆ ಸರಿ. ನಿಪಿ-14 ರಲ್ಲಿ ಸ.ನಂ.89 ತಳವಾರ ಉಂಬಳಿ ಸ್ವತ್ತು ಎಂದು ಸರ್ಕಾರದ ಆಜ್ಞೆ ಉಲ್ಲಂಘನೆ ಆಗಿದೆ ಎಂದು ಮತ್ತು ಸ.ನಂ.116/1 ವಿಸ್ತೀರ್ಣ ತಾಳೆಯಾಗಿಲ್ಲ ಎಂದು ನಮೂದಿಸಿರುತ್ತಾರೆ ಅಂದರೆ ಸರಿ. ನಿಪಿ-14 ರಲ್ಲಿ 1 ನೇ ಪಾರ್ಟಿ ನೀವಾಗಿದ್ದು, ದಾವಾ ಸ್ವತ್ತು ಸ.ನಂ.116/1 ರಲ್ಲಿ 30 ಗುಂಟೆ ಹಿಸ್ಸೆಗೆ ಬಂದಿದೆ ಎಂದರೆ ಸಾಕ್ಷಿಯು ಸದರಿ ಹಿಸ್ಸೆ ಪತ್ರವು ವಜಾ ಆಗಿದೆ ಎಂದು ಉತ್ತರಿಸುತ್ತಾರೆ. ಅದೇ ತರಹ 2 ನೇ ಪಾರ್ಟಿ ಶಿವಪ್ಪರವರಿಗೆ 31 ಗುಂಟೆ ಹಿಸ್ಸೆಗೆ ಹಾಕಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಅದೇ ತರಹ ವೀರಭದ್ರಪ್ಪರವರಿಗೆ 31 ಗುಂಟೆ ಹಿಸ್ಸೆಗೇ ಹಾಕಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವಿಸ್ತೀರ್ಣದ ಪ್ರಕಾರ 2 ಎಕರೆ 6 ಗುಂಟೆ ಆಗಬೇಕಾಗಿತ್ತು ಆದರೆ ಅದು 2 ಎಕರೆ

12 ಗುಂಟೆ ಎಂದು ಆಗಿರುವುದರಿಂದ ತಾಳೆ ಆಗಿರುವುದಿಲ್ಲ ಎಂದು ತಿರಸ್ಕರಿಸಿರುತ್ತಾರೆ ಅಂದರೆ ಸರಿ. ಅದೇ ರೀತಿ ನಿಡಿ-2 ರಂತೆ ಎಂ ಆರ್ 12/1997-98 ಪುರಸ್ಕರಿಸಿ ವಿಸ್ತೀರ್ಣವನ್ನು ಸರಿಪಡಿಸಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನೀವು ಹಾಜರುಪಡಿಸಿರುವ ನಿಪಿ-2 ಪಹಣಿ ಪತ್ರಿಕೆಯಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಪುಟ್ಟಪ್ಪ 2 ನೇ ಪ್ರತಿವಾದಿಯವರ ಹೆಸರಿಗೆ ಯಾವುದೇ ಖಾತೆ ಆಗಲಿ, ಅವರ ಹೆಸರು ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಪುಟ್ಟಪ್ಪನವರಿಗೆ 28 ಗುಂಟೆ ಜಮೀನಿಗೆ ಹಿಸ್ಸಾ ನಂ.116/3 ಎಂದು ಪೋಡಿ ದುರಸ್ತಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.89 ಕ್ಕೆ ಸಂಬಂಧಿಸಿದಂತೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ನಂ.92/2019 3 ನೇ ಪ್ರತಿವಾದಿಯವರ ವಿರುದ್ಧ ದಾಖಲಿಸಿರುತ್ತೇನೆ ಅಂದರೆ ಸರಿ. ಸದರಿ ದಾವೆಯು ದಿಃ04.12.1980 ರಲ್ಲಿ ಹಿಸ್ಸೆ ಆಗಿದೆ ಎಂದು ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೀರಿ ಅಂದರೆ ಸರಿ. ಸದರಿ ಮೇಲ್ಮನವಿಯೂ ವಜಾ ಆಗಿದೆ ಅಂದರೆ ಸರಿ. ನಿಪಿ-13 ರ ಆದೇಶದಲ್ಲಿ ಎಂ ಆರ್ ನಂ.13/2002-03 ರಲ್ಲಿ ರದ್ದು ಪಡಿಸಲು ಆದೇಶವಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಸದರಿ ರದ್ದಾದ ಎಂ ಆರ್ ನಂ. 13/2002-03 ನ್ನು ತೋರಿಸಲಾಗಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆದೇಶದ ಮೇಲೆ ಎಂ ಆರ್ ನಂ.09/2011-12 ಆಗಿದೆ ಎಂದರೆ ನನಗೆ ಗೊತ್ತಿಲ್ಲ.ನಿಪಿ-13 ರ ಆದೇಶದಂತೆ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಸಾಕ್ಷಿಗೆ ತಾನು ವ್ಯವಸಾಯ ಸಹಕಾರ ಸೊಸೈಟಿ ನಲ್ಲಿ ಮಾಡಿದ ಸಾಲದ

ಮ್ಯುಟೇಶನ್ ನು ತೋರಿಸಲಾಗಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಲಕ್ಕೋಸ್ಕರ ಒಂದು ಪತ್ರವನ್ನು ನೊಂದಣಿ ಪಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಿಪಿ-2 ದಾವಾ ಆಸ್ತಿಯ ಪಹಣಿ ಪತ್ರಿಕೆ ಸ.ನಂ.116/1 ರಿಂದ 116/3 ಎಂದು ಪೋಡಿ ದುರಸ್ತಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪೋಡಿ ದುರಸ್ತಿಯು ದಾವಾ ದಾಖಲಿಸುವ ಪೂರ್ವದಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪೋಡಿ ದುರಸತ್ತಿಗೆ ಖುದ್ದಾಗಿ ಬಂದು ಸಹಿ ಹಾಕಿ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ನಿಪಿ-14 ರಲ್ಲಿ ನಮೂದಿಸಿದ ಎಲ್ಲಾ ಸ್ವತ್ತುಗಳು ನಮ್ಮ ಕುಟುಂಬದ ಆಸ್ತಿಗಳು ಅಂದರೆ ಸರಿ. ಸದರಿ ನಿಪಿ-14 ರಲ್ಲಿ ನಮೂದಾದ ಸ್ವತ್ತುಗಳ ಸಂಬಂಧ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಿಃ 04.12.1980 ರಲ್ಲಿ ಆದಂತಹ ಹಿಸ್ಸೆ ಪತ್ರದ ಪ್ರಕಾರ ಎಲ್ಲರೂ ದಾವಾ ಸ್ವತ್ತುಗಳಲ್ಲಿ ಅನುಭವಿಸುತ್ತಾ ಬಂದಿದ್ದುಸಿ, ಈಗ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನೀವು ವಿದ್ಯಾವಂತರಾಗಿರುವುದರಿಂದ ಬೇರೆಯವರು ಹೇಳಿದ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ನೀವು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು). ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಮತ್ತು ಜೆಎಂಎಫ್ ಸಿ
ಸೊರಬ